ದಿನಾಂಕಃ 18.08.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಟಿ.ಎ. ವಕೀಲರಿಂದ:**

ಸರ್ವೆ ನಂ.407/4 ದಾವಾ ಸ್ವತ್ತಿನಲ್ಲಿ ಕಳಸ-ಕುದುರೆಮುಖ ರಾಜ್ಯ ಹೆದ್ದಾರಿ ಹಾದುಹೋಗಿರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಮಧ್ಯ ಬಾಗದಲ್ಲಿ ಸದರಿ ಹೆದ್ದಾರಿಯು ಹಾದುಹೋಗಿರುತ್ತದೆ ಹಾಗಾಗಿ ಅದರ ಎಡ ಮತ್ತು ಬಲಬಾಗದಲ್ಲಿ ನನ್ನದೇ ಜಮೀನು ಇರುತ್ತದೆ. ನಾನು ಒಟ್ಟು 15 ಗುಂಟೆ ಜಮೀನಿನಲ್ಲಿ ಸ್ವಾದೀನ ವಿದ್ದು ಸದರಿ ಜಮೀನಿನ ಮಧ್ಯದಲ್ಲಿ ಹೆದ್ದಾರಿಯು ಹಾದು ಹೋಗಿರುತ್ತದೆ. ಸಾಕ್ಷಿಯು ಸ್ವತಃ ಹಾಗಾಗಿ ಎಡಬಾಗದಲ್ಲಿ ಎಷ್ಟು ಜಮೀನು ಮತ್ತು ಬಲಬಾಗದಲ್ಲಿ ಎಷ್ಟು ಜಮೀನು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹೆದ್ದಾರಿಯ ಎಡಬಾಗದಲ್ಲಿ ಒಂದು ಪಿಳ್ಳೆ ಕಾಲುವೆ ಇದೆ ಎಂದರ ಸಾಕ್ಷಿಯು ನಮ್ಮ ಜಮೀನಿನ ಮೇಲ್ ಬಾಗದಲ್ಲಿ ಸದರಿ ಕಾಲುವೆ ಇರುತ್ತದೆ ಮತ್ತು ಸದರಿ ಕಾಲುವೆಯನ್ನು ರಸ್ತೆಯ ಪಕ್ಕದಲ್ಲಿ ಇಳುಮುಖವಾಗಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ರಸ್ತೆಯ ಪಕ್ಕದಲ್ಲಿ ಕಾಲುವೆ, ಕಾಲುವೆ ಪಕ್ಕದಲ್ಲಿ ನಮ್ಮ ಜಮೀನು ಎಂದರೆ ಸರಿ. ಸದರಿ ಕಾಲುವೆಯನ್ನು ದಾಟಲು ಮರದ ದಿಂಬಿಯನ್ನು ಹಾಕಿ ದಾರಿ ಮಾಡಿಕೊಂಡಿದ್ದೆವೆ ಎಂದರೆ ಸಾಕ್ಷಿಯ ಆ ರೀತಿಯಾಗಿ ಮಾಡಿಕೊಂಡಿರುವುದಿಲ್ಲ ಕಾಲು ನಡಿಗೆಯಲ್ಲಿ ದಾಟಬಹುದಾಗಿದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಸದರಿ ಕಾಲುವೆ ಯಾರ ದಾಟಲಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಕಾಲುವೆಯ ಮೇಲೆ ಮರದ ದಿಂಬಿಯನ್ನು ಹಾಕಿಕೊಂಡು ಬೇಡಕ್ಕಿ ಒಳಬೈಲು ಮತ್ತು ದೇವರಪಾಲು ಗ್ರಾಮಸ್ಥರು ತಿರುಗಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಕ್ಕದಲ್ಲಿ ಉಮಾದೇವಿ ಎಂಬುವವರ ಜಮೀನು ಇರುತ್ತದೆ ಎಂದರೆ ಸರಿ. ಅವರ ಜಮೀನಿನಲ್ಲಿ ಒಂದು ತೋಟದ ಮನೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯ ನಮ್ಮ ಜಮೀನಿನ ಉಮಾದೇವಿ ಎಂಬುವವರಿಗೆ ಸೇರಿದ ಗದ್ದೆ ಇರುತ್ತದೆ ಅವರ ತೋಟದ ಜಮೀನು ಬೇರೊಂದು ಕಡೆ ಇದೆ ಎಂದು ನುಡಿಯುತ್ತಾರೆ. ಸದರಿಯವರ ಗದ್ದೆಯಿಂದ ತೋಟಕ್ಕೆ ಎಷ್ಟು ಅಂತರವಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಸದರಿಯವರ ಜಮೀನಿನ ಬಾಜುದಾರಾನಾಗಿದ್ದರು ನನಗೆ ತೊಂದರೆಯುಂಟಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಉಮಾದೇವಿಯವರು ತಮ್ಮ ಜಮೀನಿಗೆ ಓಡಾಡಲು ಕಾಲುವೆಯ ಮೇಲೆ ಒಂದು ಮರದ ದಿಂಬಿಯಿಂದ ರಸ್ತೆಯನ್ನು ನಿರ್ಮಾಣ ಮಾಡಿಕೊಂಡಿದ್ದರು ಅದರ ಮೂಲಕ ವಾಹನವೂ ಚಲಾಯಿಸಬಹುದಿತ್ತು ಎಂದರೆ ಸರಿಯಲ್ಲ. ಸದರಿ ಉಮಾದೇವಿಯವರಿಂದ 1 ನೇ ಪ್ರತಿವಾದಿಯವರು 2 ನೆ ಪ್ರತಿವಾದಿಯವರ ಹೆಸರಿನಲ್ಲಿ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯವರು ಸದರಿ ಜಮೀನಿನಲ್ಲಿ ವಾಸದ ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಯವರು ಸದರಿ ಜಮೀನಿನಲ್ಲಿ

ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಆದರೆ ಸಾಕ್ಷಿಯು ಮಂದುವರೆದು ಸದರಿ ಮನೆಯು ವಾಸದ ಮನೆ ಎಂದು ಎಲ್ಲಿಯೂ ತೋರಿಸಿರುವುದಿಲ್ಲ ಅದನ್ನು Farm House ಎಂದು ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆ ನಿರ್ಮಾಣಕ್ಕೆ ವಸ್ತುಗಳನ್ನು ಕಾಲುವೆಯ ಮೇಲೆ ನಿರ್ಮಿಸಿದ್ದ ರಸ್ತೆಯ ಮುಖಾಂತರ ಸಾಗಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಬಲವಂತವಾಗಿ ಸಾಗಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ರಸ್ತೆ ಇದ್ದರೂ ಸಹ ರಸ್ತೆ ನಿರ್ಮಾಣ ಮಾಡಬಾರದೆಂದು ಸುಳ್ಳು ಪ್ರರಕಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಸ್ವತ್ತಿಗೆ ಅತಿಕ್ರಮಿಸಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಪೂರ್ಣ ಸ್ವಾದೀನಾನುಭವದಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಹೂಡುವ ಸಂದರ್ಭದಲ್ಲಿ ಹೆದ್ದಾರಿಯ ಕುರಿತು ತಿಳಿಸಲಾಗಿರುವುದಿಲ್ಲ. ಪ್ರತಿವಾದಿಯು ತಕರಾರು ಸಲ್ಲಿಸಿದ ನಂತರ ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 2018 ನೇ ಸಾಲಿನಲ್ಲಿ ಪ್ರತಿವಾದಿಯವರು 409/1, 409/2, 411/3ರ ಜಮೀನನ್ನು ಖರೀದಿಸಿರುತ್ತಾರೆ ಎಂಬ ವಿಷಯ ನನಗೆ ತಿಳಿದಿರುವುದಿಲ್ಲ ಮತ್ತು 1 ನೇ ಪ್ರತಿವಾದಿಯವರು 111/1ರ ಜಮೀನನ್ನು 2016 ರಲ್ಲಿ ಖರೀದಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಜಮೀನುಗಳಿಗೆ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಪಿಳ್ಳೆ ಕಾಲುವೆ ಮೇಲೆ ಇರುವ ಸೇತುವೆ ಮುಖಾಂತರ ಹಾದುಹೋಗಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿಯವರಿಗೆ ಪರ್ಯಾಯ ರಸ್ತೆ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರನ್ನು ಹೊರತುಪಡಿಸಿ ಬೇಡಕ್ಕಿ, ಒಳಬೈಲು ಮತ್ತು ದೇವರಪಾಲು ಗ್ರಾಮಸ್ಥರು ಸಹ ಸದರಿ ಸೇತುವೆ ಮೇಲೆ ಹಾದು ಹೋಗಬೇಕು ಎಂದರೆ ಸರಿಯಲ್ಲ. ಸದರಿ ಸೇತುವೆ ಮತ್ತು ಕಾಲುವವೆಯನ್ನು ಅತಿಕ್ರಿಮಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಇರುವ ಸೇತುವೆಯ ಮೇಲೆ ಓಡಾಡಲು ನಿಮ್ಮ ತಕರಾರು ಇದೆಯಾ ಎಂದರೆ ಸಾಕ್ಷಿಯು ಅಂತಹ ಯಾವುದೇ ಸೇತುವೆ ಹೆದ್ದಾರಿಯ ಪಕ್ಕದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿಯ ಸೇತುವೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳಸ-ಕುದುರೆಮುಖ ರಾಜ್ಯ ಹೆದ್ದಾರಿಯ ಎಡಬಾಗದಲ್ಲಿ ಇರುವ ಜಮೀನು ಕೃಷಿಗೆ ಯೋಗ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಿಂದ 14 ಈ ಪ್ರಕರಣಕ್ಕೆ ಸಂಬಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ರಸ್ತೆಯು ರಾಜ್ಯ ಹೆದ್ದಾರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದನ್ನು ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನಲ್ಲಿ ಈ ಹಿಂದಿನಿಂದಲೂ ಬತ್ತದ ಬೆಳೆಯನ್ನು ಬೆಳೆಯುತ್ತಿದ್ದೆ. ಸದರಿ ಜಮೀನಿನಲ್ಲಿ ಎಷ್ಟು ಆದಾಯ ಪಡೆಯುವುತ್ತಿದ್ದೇವೆ ಎಂದು ಹೇಳಲು ಆಗುವುದಿಲ್ಲ. ಸದರಿ ಜಮೀನಿನಲ್ಲಿ ಕೃಷಿ ಮಾಡದೇ ಇದ್ದ ಕಾರಣ ಎಷ್ಟು ಆದಯಾ ಪಡೆಯುತ್ತಿದ್ದೇವೆ ಎಂದು ಹೇಳಲು ಆಗುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಹೇಳಿರುವ ಅಂಶಗಳು ಮತ್ತು ವಾದಪತ್ರದಲ್ಲಿ ತಿಳಿಸಿರುವ ಅಂಶಗಳು

ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮತ್ತು ಗ್ರಾಮಸ್ಥರಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಸುತ್ತ ಹಾಜರುಪಡಿಸಿರುವ ದಾಖಲಾತಿಗಳನ್ನು ಅದಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.